9

# ಸಮಾರ್ಯರ ಮಧ್ಯದಲ್ಲಿ ಜೀವಿಸುವುದು

## (4:16-18)

ಬಾವಿಯ ಬಳಿಯಲ್ಲಿ ಸಮಾರ್ಯ ಸ್ತ್ರೀಯೊಂದಿಗೆ ಯೇಸುವಿನ ಚರ್ಚೆಯಲ್ಲಿ ಒಂದು ಸಂದಿಗ್ಧ ಹಂತದಲ್ಲಿ, ಆತನು ಆಕೆಯನ್ನು ಹೋಗಿ ಆಕೆಯ ಗಂಡನನ್ನು ಕರೆದು ಕೊಂಡು ಬರಬೇಕೆಂದು ಹೇಳಿದನು. ಆಕೆ ತನಗೆ ಗಂಡನಿಲ್ಲ ಎಂದು ಉತ್ತರಕೊಟ್ಟಾಗ ಯೇಸುವು ಆಕೆಗೆ, "ನೀನು ಹೇಳಿದ್ದು ಸರಿಯಾದ ಮಾತು; ನಿನಗೆ ಐದುಮಂದಿ ಗಂಡಂದಿರಿದ್ದರು. ಈಗ ಇರುವವನು ನಿನಗೆ ಗಂಡನಲ್ಲ; ನೀನು ಹೇಳಿದ್ದು ನಿಜವಾದ ಸಂಗತಿ" ಎಂದು ಹೇಳಿದನು (4:17, 18). ಮುರಿದು ಹೋದ ಮದುವೆಗಳು ಮತ್ತು ಚೂರು ಚೂರಾದ ವಚನ ಬದ್ಧತೆಗಳು ಹಿಂದಿನ ಸಮಯವನ್ನು ತುಂಬಿಕೊಂಡಿದ್ದವು ಮತ್ತು ಆಕೆಯ ಭವಿಷ್ಯವನ್ನು ನಾಶಗೊಳಿಸಿದ್ದವು.[1] ಒಂದು ಸಂಗತಿಯು ನಿಶ್ಚಿತವಾದದ್ದಾಗಿತ್ತು: ಆಕೆಯ ಜೀವಿತವು ನಿಯಂತ್ರಣವನ್ನು ತಪ್ಪಿಸಿಕೊಂಡಿತು.

ಬಾವಿಯ ಬಳಿಯಲ್ಲಿದ್ದ ಸ್ತ್ರೀಯು ಸುಖರ ಪಟ್ಟಣದ ಜನರ ಸಂಕೇತವಾಗಿದ್ದಾಳೋ ಇಲ್ಲವೋ ಎಂಬುದನ್ನು ನಾವು ಕೇವಲ ಊಹಿಸಬಹುದು. ಆಕೆಯ ಪರಿಸ್ಥಿತಿಯು ಪಟ್ಟಣದ ಜನರು ಹುಚ್ಚೇರುವಂತೆ ಮಾಡಿತೋ ಇಲ್ಲವೇ ಆಕೆಯ ಜೀವನ ಶೈಲಿಯು ಆಕೆಯನ್ನು ಒಬ್ಬ ಸಾಮಾನ್ಯ ಸ್ತ್ರೀಯನ್ನಾಗಿ ಮಾಡಿತ್ತೋ? ಬಹುಶಃ ನಾವು ಎಂದಿಗೂ ಇದನ್ನು ತಿಳಿದುಕೊಳ್ಳಲಾರೆವು. ಹೀಗಿದ್ದರೂ, ಈ ಅಧ್ಯಯನದಲ್ಲಿ ಇಂದು ಸಮಾರ್ಯದ ಸ್ತ್ರೀಯ ಅನುಭವವು ಸಾಮಾನ್ಯ ಸ್ಥಳವಾಗಿರುವ ಸಮಾಜದಲ್ಲಿ ಜೀವಿಸುತ್ತಿರುವದರ ಅನ್ವಯಗಳ ಮೇಲೆ ಪ್ರತಿಬಿಂಬಿಸಲು ಬಯಸುತ್ತೇವೆ. ಇಂದಿನ ಒಲವುಗಳು ಯು.ಎಸ್. ದಲ್ಲಿಯ ಎಲ್ಲಾ ಹೊಸ ಮದುವೆಗಳಲ್ಲಿ 50 ಶತದಷ್ಟು ವಿವಾಹ ವಿಚ್ಛೇದನದಲ್ಲಿ ಅಂತ್ಯಗೊಳ್ಳುತ್ತದೆಂಬುದನ್ನು ತೋರಿಸುತ್ತದೆ. ಅಮೇರಿಕದಲ್ಲಿ ಬಹು ಪತ್ನಿತ್ವವು ನಿಷೇಧಿಸಲ್ಪಟ್ಟಿದ್ದರೂ "ಸೀರಿಯಲ್ ಪ್ರೊಲಿಗಮಿಯು" ಒಂದೇ ಸಮಯದಲ್ಲಿ ಅನೇಕ ಸಂಗಾತಿಗಳನ್ನು ಹೊಂದಿಕೊಂಡಿರುವ ರೂಢಿಯು ನಮ್ಮ ಸುತ್ತಲೂ ಇರುತ್ತದೆ. ಎಲ್ಲದಕ್ಕಿಂತಲೂ ಹೆಚ್ಚಾಗಿ ನಮ್ಮನ್ನು ಗಲಿಬಿಲಿಗೊಳಿಸುವ ಸಂಗತಿಯು, ನಾವು ಜೀವಿಸುತ್ತಿರುವ ಸಂಸ್ಕೃತಿಯಂತೆ ಸಭೆಯು ಆಗುತ್ತಿರುವುದು. ಈ ಕಾರಣದಿಂದ ಸಮಾರ್ಯದಲ್ಲಿಯ ಬಾವಿಯ ಬಳಿಯಲ್ಲಿ ಸಮಯ ಕಳೆಯುವುದು ಮತ್ತು "ಸಮಾರ್ಯರ ಮಧ್ಯದಲ್ಲಿ ಜೀವಿಸುವ" ಜನರಂತೆ ನಮಗಾಗಿ ಪರಿಶುದ್ಧ ಬರಹಗಳ ಸಂದೇಶವನ್ನು ಹುಡುಕುವುದು ಮಹತ್ವದ್ದಾಗಿದೆ.

ನಮ್ಮ ದಿನದ "ಸಮಾರ್ಯರ" ಮಧ್ಯದಲ್ಲಿ ಯಶಸ್ವಿಯಾಗಿ ಜೀವಿಸುವುದಕ್ಕೆ ನಮಗೆ ಮೊದಲು ಕೆಲವು ಸ್ಥಿರವಾದ ಮಾಹಿತಿಯ ಅಗತ್ಯತೆಯಿದೆ, ಅದು ನಮ್ಮ ಇಂದಿನ ಪ್ರಯಾಣದ ಸೇರಬೇಕಾದ ಸ್ಥಳವಾಗಿರುವುದಿಲ್ಲ, ಆದರೆ ಅದು ಅತ್ಯವಶ್ಯವಾದ ಮೊದಲನೆಯ ಹೆಜ್ಜೆಯಾಗಿರುತ್ತದೆ.

### ಒಂದು ಇಮ್ಮಡಿ ವಚನ ಬದ್ಧತೆ

ಕೆಲವು ಸಲ ತಮ್ಮ ಮದುವೆಯನ್ನು ಮುರಿದುಕೊಳ್ಳಲು ಯೋಚಿಸುತ್ತಿರುವ ದಂಪತಿಗಳೊಂದಿಗೆ ನಾನು ಮಾತಾಡುವಾಗ, ಅವರು ಈ ರೀತಿಯ ಹೇಳಿಕೆಗಳನ್ನು ಕೊಡುವುದನ್ನು ಕೇಳಿಸಿಕೊಳ್ಳುತ್ತೇನೆ; "ಈ ರೀತಿಯ ಸಂಬಂಧದಲ್ಲಿ ನಾವು ಸುಖವಿಲ್ಲದವರಾಗಿದ್ದೇವೆ ಮತ್ತು ಇದರಿಂದ ಹೊರಗಿದ್ದರೆ ನಾವು ಹೆಚ್ಚು ಸಂತೋಷದಿಂದ ಇರುತ್ತೇವೆ. ಅಷ್ಟು ಬಹಳ

ಕೆಲಸವಾಗಿರುವ ಮದುವೆಯಲ್ಲಿ ನಾವು ಯಾಕೆ ಉಳಿದು ಕೊಳ್ಳಬೇಕು? ಅಂತೂ ಹೇಗೂ ಈ ದಿನಗಳಲ್ಲಿ ಯಾರು ಒಂದಾಗಿ ಉಳಿದು ಕೊಂಡಿರುತ್ತಾರೆ?" ಈ ಮಾತುಗಳಲ್ಲಿ ಜಗತ್ತಿನ ಉಳಿದವರಿಂದ ನಿರೀಕ್ಷಿಸುವದಕ್ಕಿಂತ ಹೆಚ್ಚಾಗಿ ಕ್ರೈಸ್ತರಲ್ಲಿ ನಾವು ಹೆಚ್ಚಾದದ್ದನ್ನು ನಿರೀಕ್ಷಿಸಲಾರೆವು ಎಂಬ ನಂಬಿಕೆಯು ಅನ್ವಯಿಸಲ್ಪಟ್ಟಿದೆ. ಅಂಥ ವಿಚಾರವು ಸೈತಾನನ ಸುಳ್ಳು ಆಗಿದೆ, ಯಾಕಂದರೆ ಪರಿಶುದ್ಧ ಬರಹಗಳು ಪ್ರತಿಪಾದನೆಯಿಲ್ಲದೇ, ಕ್ರೈಸ್ತರಿಗಾಗಿ ನಡತೆಯ ಉನ್ನತ ಮಟ್ಟವನ್ನು ಬೋಧಿಸುತ್ತವೆ.

ವಿಶ್ವಾಸಿಗಳಿಗಾಗಿ ದೇವರ ಮಟ್ಟವನ್ನು ಕುರಿತು, ಪೌಲನು ಹೀಗೆ ಘೋಷಿಸಿದನು,

> ಜಾರರ ಸಹವಾಸ ಮಾಡಬಾರದೆಂದು ನನ್ನ ಪತ್ರಿಕೆಯಲ್ಲಿ ಬರೆದಿದ್ದೆನಷ್ಟೆ, ಈ ಲೋಕದಲ್ಲಿರುವ ಜಾರರು, ಲೋಭಿಗಳು, ಸುಲುಕೊಳ್ಳುವವರು, ವಿಗ್ರಹಾರಾಧಕರು ಇವರ ಸಹವಾಸವನ್ನು ಬಿಟ್ಟು ಬಿಡಬೇಕೆಂದು ನನ್ನ ತಾತ್ಪರ್ಯವಲ್ಲ; ಹಾಗೆ ಬಿಡಬೇಕಾದರೆ ನೀವು ಈ ಲೋಕವನ್ನೇ ಬಿಟ್ಟುಹೋಗ ಬೇಕಾಗುವದು. ಆದರೆ ಕ್ರೈಸ್ತ ಸಹೋದರ ನೆನಿಸಿಕೊಂಡವನು ಜಾರನಾದರೂ, ಲೋಭಿಯಾದರೂ, ವಿಗ್ರಹಾರಾಧಕನಾದರೂ ಬೈಯುವವನಾದರೂ ಕುಡಿಕನಾದರೂ, ಸುಲುಕೊಳ್ಳುವವನಾದರೂ ಆಗಿದ್ದ ಪಕ್ಷದಲ್ಲಿ ಅವನ ಸಹವಾಸ ಮಾಡಬಾರದು, ಅಂಥವನ ಸಂಗಡ ಊಟ ಮಾಡಲೂ ಬಾರದು ಎಂದು ಬರೆದಿದ್ದೆನು. ಹೊರಗಿನವರನ್ನು ಕುರಿತು ತೀರ್ಪುಮಾಡುವದಕ್ಕೆ ನನಗೇನಧಿಕಾರ? ಒಳಗಿನವರನ್ನು ಕುರಿತು ತೀರ್ಪುಮಾಡುವವರು ನೀವು ಅಲ್ಲವೇ. ಹೊರಗಿನವರನ್ನು ಕುರಿತು ತೀರ್ಪುಮಾಡುವವನು ದೇವರು. ಆ *ದುಷ್ಟನನ್ನು ನಿಮ್ಮ ಮಧ್ಯದಿಂದ* ತೆಗೆದು ಹಾಕಬೇಕು (1 ಕೊರಿಂಥ 5:9-13; ಒತ್ತಿ ಹೇಳಿದ್ದು ನನ್ನದು).

ಈ ವಚನಗಳಲ್ಲಿ ಒಂದು ಸ್ಪಷ್ಟವಾದ "ಇಮ್ಮಡಿ ಮಟ್ಟವು" ಕಂಡು ಬರುತ್ತದೆ. ಕ್ರೈಸ್ತರು ಅನೈತಿಕ ಕ್ರೈಸ್ತರೊಂದಿಗೆ ಸಂಬಂಧವಿಟ್ಟುಕೊಳ್ಳಬಾರದು, ಆದರೆ ಅವರು ಅನೈತಿಕ ಕ್ರೈಸ್ತೇತರೊಂದಿಗೆ ಸಂಬಂಧವಿಟ್ಟುಕೊಳ್ಳಬಹುದು, ಯಾಕೆ? ಯಾಕಂದರೆ ಕ್ರೈಸ್ತರಿಂದ ಬಹಳ ಹೆಚ್ಚಾದದ್ದು ನಿರೀಕ್ಷಿಸಲ್ಪಟ್ಟಿದೆ. "ಬೇರೆ ಪ್ರತಿಯೊಬ್ಬರಿಂದ ಅದು ಮಾಡಲ್ಪಡುತ್ತಿದೆ" ಎಂದು ಹೇಳುವದರಿಂದ ತನ್ನ ನಡತೆಯನ್ನು ಸರಿಯೆಂದು ಒಬ್ಬ ಕ್ರೈಸ್ತನು ತೋರಿಸಲು ಹುಡುಕುವಾಗ, ನಾವು, "ಹೌದು, ಆದರೆ ದೇವರು ಅವರಿಂದ ನಿರೀಕ್ಷಿಸುವದಕ್ಕಿಂತ ಹೆಚ್ಚಾದದ್ದನ್ನು ಆತನು ನಮ್ಮಿಂದ ನಿರೀಕ್ಷಿಸುತ್ತಾನೆ, ಯಾಕಂದರೆ ನಾವು ಕ್ರೈಸ್ತರಾಗಿದ್ದೇವೆ" ಎಂದು ಉತ್ತರ ಕೊಡತಕ್ಕದ್ದು.

ಪೌಲನು ರೋಮಾಪುರದವರಿಗೆ ತನ್ನ ಪತ್ರಿಕೆಯನ್ನು ಬರೆದಾಗ, ತಾತ್ವಿಕ ಬೋಧನೆ ಮತ್ತು ವಿಷಯಗಳಿಗೆ ಮೊದಲಿನ ಹನ್ನೊಂದು ಅಧ್ಯಾಯಗಳನ್ನು ಅವನು ಮೀಸಲಾಗಿಟ್ಟನು. ಆ ಮೇಲೆ ಅವನು ಈ ಮಾತುಗಳೊಂದಿಗೆ ನಡತೆಯ ವಿಷಯಗಳನ್ನು ಹೇಳಲು ಪ್ರಾರಂಭಿಸಿದನು:

> ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನೆಂದರೆ - ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕ ಪೂರ್ವಕವಾದ ಆರಾಧನೆಯು. ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಗೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ (ರೋಮಾಪುರ 12:1, 2).

ಜೆ. ಬಿ. ಫಿಲಿಪ್ಸ್ ಅವರ ಈ ವಚನದ ಪ್ರಸಿದ್ಧ ಭಾಷಾಂತರವು "ಜಗತ್ತು ತನ್ನ ಅಚ್ಚಿನಲ್ಲಿ ನಿಮ್ಮನ್ನು ಒತ್ತದಿರಲಿ" ಎಂದಿರುತ್ತದೆ. ಜಗತ್ತು ಒಂದು ಮಾರ್ಗವಾಗಿದೆ, ಮತ್ತು ಕ್ರೈಸ್ತರು ಬೇರೊಂದು ಆಗಿರಬೇಕಾಗಿದೆ. ಜಗತ್ತಿನಿಂದ ಸ್ವೀಕರಿಸಲ್ಪಡುವದಲ್ಲ ಆದರೆ ದೇವರಿಗೆ

ಭಕ್ತಿಯು ನಮ್ಮ ಜೀವಿತಗಳ ಸಾಧನೆಯಾಗಿರಬೇಕು.

"ಶರೀರ ಭಾವದ ಕರ್ಮಗಳು" ಮತ್ತು "ಪರಿಶುದ್ಧಾತ್ಮನ ಫಲದ" ಬಗ್ಗೆ ಬರೆದಾಗ, ಪೌಲನು ಜಗತ್ತಿನ ಮಾರ್ಗವನ್ನು ಮತ್ತು ಕ್ರೈಸ್ತರ ಮಾರ್ಗವನ್ನು ವ್ಯತೀರಿಕ್ತವಾಗಿ ಇಟ್ಟಿದ್ದಾನೆ:

> ಶರೀರ ಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಅವೆ; ಯಾವವೆಂದರೆ - ಜಾರತ್ವ - ಬಂಡುತನ ನಾಚಿಕೆಗೇಡಿತನ ವಿಗ್ರಹಾರಾಧನೆ ಮಾಟ ಹಗೆತನ ಜಗಳ ಹೊಟ್ಟೇಕಿಚ್ಚು ಸಿಟ್ಟು ಕಕ್ಷಭೇಧ ಭಿನ್ನಮತ ಮತ್ಸರ ಕುಡಿಕತನ ದುಂದೌತನ ಇಂಥವುಗಳೇ, ಇವುಗಳ ವಿಷಯದಲ್ಲಿ - ಇಂಥ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯ ರಾಗುವದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸು ತ್ತೇನೆ. ಆದರೆ ದೇವರಾತ್ಮನಿಂದ ಉಂಟಾಗುವ ಫಲವೇನಂದರೆ - ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ, ಇಂಥವುಗಳೇ. ಇಂಥವುಗಳನ್ನು ಯಾವ ಧರ್ಮಶಾಸ್ತ್ರವೂ ಆಕ್ಷೇಪಿಸುವದಿಲ್ಲ (ಗಲಾತ್ಯ 5:19-23).

ದೇವರ ಮಗುವು ಜೀವಿಸುವ ಮಾರ್ಗದ ಮತ್ತು ಈ ಲೋಕದ ಮಗುವು ಜೀವಿಸುವ ಮಾರ್ಗದ ಮಧ್ಯದಲ್ಲಿ ಭಿನ್ನತೆಯು ಪೂರ್ಣವಾದದ್ದಾಗಿದೆ; ಅವರು ಸಂಪೂರ್ಣವಾಗಿ ಭಿನ್ನವಾದ ದಾರಿಗಳನ್ನು ಅನುಸರಿಸಬೇಕಾಗಿದೆ. ನಾವು ಭಿನ್ನವಾಗಿದ್ದೇವೆ ಹಾಗೂ ನಮ್ಮ ಸಂಸ್ಕೃತಿಯೊಂದಿಗೆ ಬಾಹಿರರಾಗಿದ್ದೇವೆ ಎಂಬುದು ನಮ್ಮನ್ನು ಆಶ್ಚರ್ಯಗೊಳಿಸಬಾರದು; ನಮ್ಮ ಸುತ್ತಲಿರುವ ಪ್ರತಿಯೊಬ್ಬರಂತೆ ಇರುವದನ್ನು ನಾವು ಕಂಡುಕೊಳ್ಳುವಾಗ ಅದು ನಮ್ಮನ್ನು ಆಶ್ಚರ್ಯಗೊಳಿಸಬೇಕು ಹಾಗೂ ನಮಗೆ ಸಂಬಂಧಿಸಿರಬೇಕು! ಎಷ್ಟು "ಶರೀರದ ಕೃತ್ಯಗಳು" ಮತ್ತು "ಪರಿಶುದ್ಧಾತ್ಮನ ಫಲವು" ಮದುವೆಗೆ ಅನ್ವಯಿಸುವುದು ಎಂಬುದನ್ನು ನೀವು ಗಮನಿಸಿದಿರೋ? ಆದುದರಿಂದ ಮದುವೆಗೆ ಕ್ರೈಸ್ತ ಮಾರ್ಗವೇ ಮತ್ತು ಮದುವೆಯ ಕ್ರೈಸ್ತೇತರರ ಮಾರ್ಗಕ್ಕೆ ಸಾಮಾನ್ಯವಾದದ್ದು ಇಲ್ಲ ಎಂಬುದನ್ನು ನಿರೀಕ್ಷಿಸುತ್ತೇವೆ.

## ಒಂದು ಜೀವಾವಧಿ ವಚನ ಬದ್ಧತೆ

ವಿವಾಹ ವಿಚ್ಛೇದನದ ಕಡೆಗೆ ದೇವರ ತಿರಸ್ಕಾರದ ಬಗ್ಗೆ ಮಲಾಕಿಯನು ಬರೆದನು, "ಇಸ್ರಾಯೇಲಿನ ದೇವರಾದ ಯೆಹೋವನು ಇಂತೆನ್ನುತ್ತಾನೆ - ನಾನು ಪತ್ನೀತ್ಯಾಗವನ್ನೂ ಹೆಂಡತಿಗೆ ಅನ್ಯಾಯ ಮಾಡುವವನನ್ನೂ ಹಗೆಮಾಡುತ್ತೇನೆ; ಇದು ಸೇನಾಧೀಶ್ವರ ಯೆಹೋವನ ನುಡಿ; ಆದಕಾರಣ ನಿಮ್ಮ ಆತ್ಮವನ್ನು ಎಚ್ಚರಿಕೆಯಿಂದ ನೋಡಿಕೊಳ್ಳಿರಿ, ದ್ರೋಹ ಮಾಡಬೇಡಿರಿ" (ಮಲಾಕಿಯ 2:16). ಆ ವಚನವನ್ನು ನೀವು ತಪ್ಪಾಗಿ ಓದದಂತೆ ಎಚ್ಚರಿಕೆಯಿಂದಿರಿ. ವಿವಾಹ ವಿಚ್ಛೇದನ ಮಾಡಿಕೊಂಡ ಜನರನ್ನು ಹಗೆ ಮಾಡುವೆನೆಂದು ದೇವರು ಹೇಳುತ್ತಿರುವದಿಲ್ಲ; ವಿವಾಹ ವಿಚ್ಛೇದನವನ್ನು ದೇವರು ಹಗೆಮಾಡುತ್ತಾನೆಂದು ಅದು ಹೇಳುತ್ತದೆ. ದೇವರ ದೃಷ್ಟಿಯಲ್ಲಿ ವಿವಾಹ ವಿಚ್ಛೇದನವು ಒಂದು ಒಡಂಬಡಿಕೆಯನ್ನು ಮುರಿಯುವುದಾಗಿದೆ. ಅದು ಒಂದು ವಚನ ಬದ್ಧತೆಯನ್ನು ಮರೆತುಬಿಡುವುದಾಗಿದೆ. ಅದಕ್ಕೆ ಕೂಡಿಸಿ, ಮೊದಲ ಸ್ಥಾನದಲ್ಲಿ ದೇವರು ತಾನೇ ಒಂದುಗೂಡಿಸಿದ್ದನ್ನು ಬೇರೆಯಾಗಿ ಹರಿಯುವಂಥದ್ದಾಗಿದೆ. "ಆದುದರಿಂದ ದೇವರು ಕೂಡಿಸಿದ್ದನ್ನು ಮನುಷ್ಯನು ಅಗಲಿಸಬಾರದು" (ಮಾರ್ಕ 10:9). ಸಮಯದ ಪ್ರಾರಂಭದಿಂದಲೇ ಜನರಿಗಾಗಿ ದೇವರ ಯೋಜನೆಯು ಜೀವಾವಧಿಗಾಗಿ ಒಬ್ಬ ಪುರುಷನು ಒಬ್ಬ ಸ್ತ್ರೀಗಾಗಿ ಇರುವುದಾಗಿದೆ. ಅದು ಸುಲಭವಾದದ್ದಾಗಿರುವದಿಲ್ಲ, ಎಂಬುದನ್ನು ಆತನು ಬಲ್ಲನು, ಮತ್ತು ಅದು ಜಗತ್ತಿನ ವಿರಳವಾದ ಮಾರ್ಗವಾಗಿದೆ, ಆದರೆ ಅದು ಅತ್ಯುತ್ತಮವಾದದ್ದೆಂದು ಆತನು ತಿಳಿದಿದ್ದಾನೆ. ಆದದರಿಂದ, ಆತನು ತನ್ನ ಜನರನ್ನು ಆ ಉನ್ನತ ಮಟ್ಟದಿಂದ ಜೀವಿಸಲು ಕರೆಯುತ್ತಾನೆ.

ಪೌಲನು ಇದೇ ಮಟ್ಟವನ್ನು ಪ್ರಥಮ ಶತಮಾನದ ಕೊರಿಂಥದ ಅನೈತಿಕ ಸ್ಥಿತಿಯಲ್ಲಿ ಪ್ರಕಟಿಸಿದನು (1 ಕೊರಿಂಥ 7:10-16). ತಮ್ಮ ಸಂಗಾತಿಗಳು ಕ್ರೈಸ್ತರಾಗದೇ ಇದ್ದವರು ತಮ್ಮ ಮದುವೆಗಳಲ್ಲಿ ಉಳಿದುಕೊಳ್ಳಬೇಕೆಂದು ಅವನು ಕೊರಿಂಥದವರನ್ನು ಕರೆದನು. ಅಂಥ ಸಂಬಂಧಗಳು ನಿಶ್ಚಯವಾಗಿ ಕಠಿಣವಾದವುಗಳಾಗಿದ್ದವು, ಮತ್ತು ಅನೇಕರು ತಮ್ಮ ಅನ್ಯ ಸಂಗತಿಗಳ ಪ್ರಭಾವದಿಂದ ದೂರ ಹೋಗುವುದು ಕ್ರೈಸ್ತರಿಗೆ ಒಳ್ಳೆಯದೆಂದು ಹೇಳುತ್ತಿದ್ದಿರ ಬಹುದು. ಕಷ್ಟದ ಪರಿಸ್ಥಿತಿಗಳಲ್ಲಿಯೂ ಸಹ ಈ ಕ್ರೈಸ್ತರು ಮಾಡಬೇಕಾದ ಸರಿಯಾದ ಸಂಗತಿಯು ತಮ್ಮ ಮದುವೆಗಳಲ್ಲಿ ಉಳಿದು ಕೊಂಡಿದ್ದು ಅವರು ಮಾಡಿದ್ದ ಒಡಂಬಡಿಕೆಗಳನ್ನು ಗೌರವಿಸುವಂಥದ್ದಾಗಿದೆ. ದೇವರು ತನ್ನ ಮಕ್ಕಳು ಕಠಿಣವಾದ ಉನ್ನತ ಮಟ್ಟವನ್ನು ಹಿಡಿಯ ಬೇಕೆಂದು ನಿರೀಕ್ಷಿಸುತ್ತಾನೆ, ಜಗತ್ತು ಏನನ್ನೇ ಮಾಡುತ್ತಿದ್ದರೂ, ದೇವರು ತನ್ನ ಮಕ್ಕಳು ತಮ್ಮ ಮದು ವೆಯ ಪ್ರತಿಜ್ಞೆಗಳಿಗೆ ನಂಬಿಗಸ್ತರಾಗಿ ಉಳಿಯುವದನ್ನು ನಿರೀಕ್ಷಿಸುತ್ತಾನೆ.

## ಒಂದು ಸಮಾಜದ ವಚನ ಬದ್ಧತೆ

ಸೊರೆನ್ ಕಿರ್ಕೆಗಾರ್ಡ್, ಒಬ್ಬ ಡೇನಿಶ್ ತತ್ವ ಜ್ಞಾನಿಯು, ಒಮ್ಮೆ ಹೀಗೆ ಬರೆದನು, "ಒಂದು ಕ್ರೈಸ್ತ ದೇಶದಲ್ಲಿ ಮಾಹಿತಿಯ ಕೊರತೆಯಿರುವದಿಲ್ಲ; ಬೇರೆಯಾವುದೋ ಕೊರತೆಯಾಗಿದೆ, ಮತ್ತು ಅದು ಒಬ್ಬ ಮನುಷ್ಯನು ಇನ್ನೊಬ್ಬನಿಗೆ ನೇರವಾಗಿ ನಿವೇದಿ ಸಲಾರದ ಸಂಗತಿಯಾಗಿರುತ್ತದೆ."[2] ಸರಿಯಾದ ಮಾಹಿತಿಯನ್ನು ಪಡೆದುಕೊಳ್ಳುತ್ತಿರುವುದು ಸಮಾರ್ಯದ ಮಧ್ಯದಲ್ಲಿ ಜೀವಿಸುವದರೊಂದಿಗೆ ಹೇಗೆ ನಾವು ಸರಿಸಮಾನವಾಗಿರುವದಕ್ಕೆ "ಬೇರೆ ಯದು ಕೊರತೆಯಾಗಿದೆ" ಎಂಬುದರ ಪ್ರಾರಂಭವಾಗಿದೆ. ನಾನು ತಿಳಿದವರಲ್ಲಿ ಯಾರು ವಿವಾಹ ವಿಚ್ಛೇದನವನ್ನು ನಿರೀಕ್ಷಿಸಿ ಮದುವೆಯೊಳಗೆ ಪ್ರವೇಶಿಸಲಿಲ್ಲ. ರೇಡಿಯೋದಲ್ಲಿ ಪ್ರಾಪಂಚಿಕ ಪ್ರೇಮ ಗೀತೆಗಳೂ ಸಹ "ಎಂದೆಂದಿಗೂ" ಮತ್ತು "ಯಾವಾಗಲು" ಎಂಬ ಪದಗಳನ್ನು ಉಪಯೋಗಿ ಸುತ್ತೇವೆ. ಕಾಲೇಜ ವಯಸ್ಸಿನ ಜೋಡಿಗಳಿಗೆ ವಿವಾಹ ಪೂರ್ವ ಸಲಹೆಯನ್ನು ಆಗಾಗ ಕೊಡುತ್ತೇನೆ. ವಿವಾಹ ವಿಚ್ಛೇದನೆಯ ಬಗ್ಗೆ ನಾವು ಮಾತಾಡುವಾಗ, ಅವರು ಬಾಯಿ ತೆರೆಯುವ ಮೊದಲೇ ಅವರು ಏನು ಹೇಳುವರು ಎಂಬುವದು ನನಗೆ ತಿಳಿದಿರುತ್ತದೆ. "ನಾವು ವಿವಾಹ ವಿಚ್ಛೇ ದನದಲ್ಲಿ ನಂಬುವುದಿಲ್ಲ" ಎಂದು ಅವರು ಭರವಸೆಯಿಂದ ಒಪ್ಪಿಕೊಳ್ಳುತ್ತಾರೆ. "ವಿವಾಹ ವಿಚ್ಛೇದನವು ನಮಗೆ ಆಯ್ಕೆಯ ವಿಷಯವಾಗಿರುವುದಿಲ್ಲ." ಮದುವೆಯನ್ನು ಪ್ರಾರಂಭಿಸುವ ಮೊದಲು ಅವರು ಚೆನ್ನಾಗಿ ತಿಳಿದಿದ್ದರೆ, ಯಾಕೆ ಅಷ್ಟು ದಂಪತಿಗಳು ವಿವಾಹ ವಿಚ್ಛೇದನದಲ್ಲಿ ಅಂತ್ಯಗೊಳ್ಳುವರು? ಮಾಹಿತಿಗಿಂತ ಹೆಚ್ಚಾದದ್ದು ಯಾವುದೋ ಕೊರತೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಹೊಯ್ದಾಡುತ್ತಿರುವ ಮದುವೆಗಳಲ್ಲಿ ಇಲ್ಲದೇ ಹೋಗಿರುವ ಸಂಗತಿಯು ಸಭೆ ಎಂದು ನಾನು ನಂಬುತ್ತೇನೆ. ಮೊದಲನೆಯದಾಗಿ, ಅದು ಸಮಾನ ಒತ್ತಡವನ್ನು ಒದಗಿಸುವ, ಜನರು ಒಂದಾಗಿ ಜೀವಿಸುವ ಸಮಾಜವಾಗಿರುತ್ತದೆ. ನಾವು ಪ್ರತೀ ಸಲ ಕೂಡಿ ಬರುವಾಗ, ಐವತ್ತು ಇಲ್ಲವೇ ಅರವತ್ತು ವರ್ಷ ಒಂದಾಗಿ ಜೀವಿಸಿದ ಜನರನ್ನು ನೋಡುತ್ತೇವೆ. ಮತ್ತು ಅವರನ್ನು ನೋಡುವುದು ನಮಗೆ ಧೈರ್ಯವನ್ನು ಕೊಡುತ್ತದೆ. ಹೋರಾಡುತ್ತಿರುವ ಮದುವೆ ಗಳೂ ಸಹ ನಮ್ಮನ್ನು ಪ್ರೋತ್ಸಾಹಿಸುತ್ತವೆ, ಯಾಕಂದರೆ ಅವು ಜನರು ತಮ್ಮ ಮದುವೆಗಳನ್ನು ಬಲಪಡಿಸುವದಕ್ಕಾಗಿ ಕಠಿಣವಾಗಿ ಕೆಲಸ ಮಾಡಲು ಸಿದ್ಧರಾಗಿರುವದನ್ನು ತೋರಿಸುತ್ತೇವೆ.

ಸಭೆಯು ಸಹ ಮದುವೆಯ ವಚನಬದ್ಧತೆಗೆ ನಿರ್ಣಾಯಕವಾದ್ದಾಗಿದೆ, ಯಾಕಂದರೆ ಅದು ಒಂದು ವಿಶಾಲವಾದ ಕುಟುಂಬವನ್ನು ಒದಗಿಸುತ್ತದೆ; ಅದರೊಳಗೆ ನಮ್ಮ ಕುಟುಂಬಗಳು ಜೀವಿಸಬಹುದು, ಹೋರಾಡಬಹುದು, ಪೋಷಿಸಲ್ಪಡಬಹುದು ಮತ್ತು ಉಳಿದುಕೊಳ್ಳಬಹುದು. ಅಮೇರಿಕನ್ ಕ್ರೈಸ್ತರು ಸಭೆಯನ್ನು ಮದುವೆಗಾಗಿ ಒಂದು ಮಾಹಿತಿ ಕೇಂದ್ರದಂತೆ ನೋಡು ವರೆಂದು ನಾನು ಭಯಪಡುತ್ತೇನೆ. ಆ ಮನೋಭಾವನೆಯು ಸಭೆಯನ್ನು ಬೋಧನೆಗಾಗಿ,

ಸೆಮಿನಾರುಗಳಿಗಾಗಿ ಮತ್ತು ವರ್ಕ್‌ಶಾಪ್‌ಗಳಿಗಾಗಿ ನೋಡುತ್ತದೆ. ಅಲ್ಲಿಗೆ ಮಾಹಿತಿಯನ್ನು ಪಡೆದುಕೊಳ್ಳಲು ಹೋಗಬಹುದು, ಅಲ್ಲಿಂದ ಮನೆಗೆ ಹೋಗಿ, ಸಭೆಯ ಉಳಿದವರಿಂದ ಪ್ರತ್ಯೇಕ ವಾಗಿ ಆ ಮಾಹಿತಿಯನ್ನು ಕಾರ್ಯಾಚರಣೆಯಲ್ಲಿ ತರಲು ಪ್ರಯತ್ನಿಸಬಹುದು. ಹೆಚ್ಚು ಬೈಬಲಿಗನುಗುಣ ವಾದ ಮಾದರಿಯು ನಮ್ಮ ಮದುವೆಗಳು ವಿಶಾಲವಾದ ಸಮಾಜದ ಭಾಗವಾಗಿರುವುದಾಗಿದೆ.

ತೀತನಿಗೆ ಬರೆಯುವಲ್ಲಿ, ಪೌಲನು ಕುಟುಂಬ ತರಬೇತಿಗಾಗಿ ಸಭೆಯು ಒಂದು ಕೇಂದ್ರವಾಗಿರುವ ರೀತಿಯನ್ನು ವಿವರಿಸಿದ್ದಾನೆ, ಯುವತಿಯರು ಹೇಗೆ ಕ್ರೈಸ್ತ ಪತ್ನಿಯರು ಮತ್ತು ತಾಯಂದಿರು ಆಗಿರಬೇಕೆಂಬುದನ್ನು ವೃದ್ಧ ಮಹಿಳೆಯರು ಬೋಧಿಸಬೇಕು (ತೀತ 2:1-5). ಆ ರೀತಿಯಲ್ಲಿ ಸಭೆಯು ಕಾರ್ಯಮಾಡುವಾಗ, ಯುವ ಜನರಿಗೆ ಇಲ್ಲವೇ ಅಪ್ರಬುದ್ಧರಿಗೆ ವಯಸ್ಸಿನ ಅನುಭವದ, ಮತ್ತು ಸಹಾಯದ ಅಗತ್ಯವಾದ ಮೂಲಗಳಿಗೆ ಮಾರ್ಗಗಳಿರುತ್ತವೆ. ತೊಂದರೆಯು ಬರುವಾಗ, ಪ್ರತಿಯೊಬ್ಬರು ವೇದನೆಯನ್ನು ಹಂಚಿಕೊಳ್ಳುವರು ಮತ್ತು ಅಗತ್ಯತೆಯಲ್ಲಿರುವವರಿಗೆ ಸಹಾಯ ಮಾಡುಲು ಸುತ್ತುವರಿಯುವರು, ತಿರಸ್ಕಾರವು ಇಲ್ಲವೆ ದುರುಪಯೋಗವು ಸಂಭವಿಸುವಾಗ, ''ಕುಟುಂಬದ ಸದಸ್ಯರು'' ಮುಂದೆ ಬಂದು ವ್ಯಕ್ತಿಗಳನ್ನು ಅವರ ನಡತೆಗಾಗಿ ಜವಾಬ್ದಾರರನ್ನಾಗಿ ಮಾಡುವರು, ಮತ್ತು ದಂಪತಿಗಳಿಗೆ ಅವರ ಸಮಸ್ಯೆಯನ್ನು ಬಗೆ ಹರಿಸಿಕೊಳ್ಳಲು ಸಹಾಯ ಮಾಡುವರು. ಯಾರಾದರೂ ಸಭೆಯ ಬಗ್ಗೆ ಹೀಗೆ ಹೇಳುವದನ್ನು ಕೇಳುವಾಗ ನಾನು ಯಾವಾಗಲೂ ಪ್ರೋತ್ಸಾಹಿಸಲ್ಪಡುತ್ತೇನೆ. "ನಮ್ಮ ಕತ್ತಲೆಯ ತಾಸಿನಲ್ಲಿ ಅವರು ನಮ್ಮೊಂದಿಗೆ ನಿಂತು ಕೊಂಡರು ಮತ್ತು ಹೋರಾಟದ ಮುಖಾಂತರ ನಮ್ಮೊಂದಿಗೆ ನಡೆದಾಡಿದರು. ಅವರು ನಮಗೆ ಕುಟುಂಬವಾಗಿದ್ದರು!"

ಅಂಥ ಅವಶ್ಯಕ ಸಂಬಂಧಗಳು ಸಭೆಯಲ್ಲಿ ಅಭಿವೃದ್ಧಿಗೊಳ್ಳಬೇಕಾದರೆ, ದಂಪತಿಗಳು ತಮಗೆ ಅಗತ್ಯವಾಗಬಹುದಾದ ಬೆಂಬಲದೊಂದಿಗೆ ಅವರು ಸಂಬಂಧಿಸುವದನ್ನು ನೋಡುವದಕ್ಕಾಗಿ ಜವಾ ಬ್ದಾರಿಕೆಯನ್ನು ತೆಗೆದುಕೊಳ್ಳತಕ್ಕದ್ದು. ಒಂದು ಸಂಗತಿಗಾಗಿ, ಅವರು ಮೆಚ್ಚಿಕೊಳ್ಳುವ ಪ್ರಾಯಸ್ಥ, ಹೆಚ್ಚು ಅನುಭವವಿದ್ದ ದಂಪತಿಗಳನ್ನು ಹುಡುಕುವ ಅವಶ್ಯಕತೆಯುಳ್ಳವರಾಗಿರುವರು. ಅವರು ತಮ್ಮ ಸಲಹೆಗಾರರನ್ನು ತಮ್ಮ ಮನೆಗಳಿಗೆ ಊಟಕ್ಕಾಗಿ ಆಮಂತ್ರಿಸುವ ಅವಶ್ಯಕತೆಯಿದೆ. ಮತ್ತು ಬುದ್ಧಿವಂತಿಕೆಯ ಹಾಗೂ ಮೃದುವಾದ ಸಲಹೆಯನ್ನು ಪ್ರೋತ್ಸಾಹದಾಯಕ ಬೆಂಬಲವನ್ನು ಒದಗಿಸ ಬಲ್ಲ ಈ ಜನರೊಂದಿಗೆ ಸಮಯ ಕಳೆಯುವ ಮಾರ್ಗಗಳನ್ನು ಕಂಡುಕೊಳ್ಳ ಬೇಕು. ನನ್ನ ಹೆಂಡತಿ ಮತ್ತು ನಾನು ವಿವಾಹವಾದಾಗ, ನಾವು ಮಿಸ್ಸಿಸ್ಸಿಪ್ಪಿಯಲ್ಲಿ ಒಂದು ಸಣ್ಣ ಪಟ್ಟಣಕ್ಕೆ ಹೋದೆವು. ಅಲ್ಲಿ ನಾನು ಒಂದು ಸಭೆಗಾಗಿ ಪ್ರಸಂಗಿಸುತ್ತಿದ್ದೆನು. ಹಾಗೂ ನನ್ನ ಹೆಂಡತಿ ಸ್ಥಳಿಕ ಆಸ್ಪತ್ರೆಯಲ್ಲಿ ಕೆಲಸ ಮಾಡುತಿದ್ದಳು. ನಾವು ಅಲ್ಲಿಗೆ ಹೋದಾಗ ಪಟ್ಟಣದಲ್ಲಿ ಯಾರು ನಮಗೆ ಪರಿಚಿತರಿರಲಿಲ್ಲ. ನಾವು ಬೇಗನೇ ನಮಗಿಂತ ಮೂವತ್ತು ವರ್ಷ ಹೆಚ್ಚು ಪ್ರಾಯಸ್ಥರಾದ ಒಂದು ಅದ್ಭುತವಾದ ಕ್ರೈಸ್ತ ದಂಪತಿಗಳಿಂದ ನಾವು ತೆಗೆದುಕೊಳ್ಳಲ್ಪಟ್ಟೆವು. ನಮ್ಮ ಮದುವೆಯ ಮೊದಲಿನ ಎರಡು ವರ್ಷಗಳಲ್ಲಿ, ಲ್ಯಾರಿ ಮತ್ತು ವೈನಿ ಮರ್ರೆಯವರು ನಮಗೆ ಊಟಕೊಟ್ಟರು, ನಮ್ಮನ್ನು ಪ್ರೋತ್ಸಾಹಿಸಿದರು, ನಮ್ಮೊಂದಿಗೆ ಕಾರ್ಡ್ ಆಟವಾಡಿದರು, ಮತ್ತು ನಮ್ಮೊಂದಿಗೆ ಚರ್ಚಿಗೆ ಹೋದರು. ನಮ್ಮ ಮೊದಲ ಮನೆಯನ್ನು ಅದ್ಭುತಕರವಾದ ಅನುಭವವಾಗುವಂತೆ ಮಾಡಿದ್ದಕ್ಕಾಗಿ ಅವರನ್ನು ಮೆಚ್ಚಿಕೊಳ್ಳುತ್ತೇವೆ ಮತ್ತು ಸಭೆಯು ತನ್ನ ಎಲ್ಲಾ ಕುಟುಂಬಗಳನ್ನು ಪ್ರೋತ್ಸಾಹಿಸುವ ರೀತಿಯನ್ನು ನಾವು ಯೋಚಿಸುವಾಗ ಅವರ ಬಗ್ಗೆ ನಾವು ಯೋಚಿಸುತ್ತೇವೆ.

ತೊಂದರೆಯು ಪ್ರಾರಂಭವಾಗುವ ಮೊದಲು ದಂಪತಿಗಳು ಕ್ರೈಸ್ತ ಸ್ನೇಹಿತರ ಬಲವಾದ ಜಾಲವನ್ನು ಕಟ್ಟಲು ಕಾರ್ಯಮಾಡಬೇಕು. ಒಮ್ಮೆ ಮದುವೆಯ ಬಿಕ್ಕಟ್ಟಿನಲ್ಲಿ ಇದ್ದರೆ, ಪ್ರತಿಯೊಂದು ಮದುವೆಗೆ ಅಗತ್ಯವಾಗಿರುವ ಪರಸ್ಪರ ಸ್ನೇಹವನ್ನು ಬೆಳಸುವುದು ನಿಜವಾ ಗಿಯೂ ಅಸಾಧ್ಯವಾದದ್ದಾಗಿದೆ. ಪ್ರಸಂಗಿ ಗ್ರಂಥದಲ್ಲಿ ಪ್ರಸಂಗಿಯು ಯುವ ಜನರಿಗೆ ಹೀಗೆ ಬುದ್ಧಿವಾದ ಹೇಳಿದ್ದಾನೆ; "ಕಷ್ಟದ ದಿನಗಳೂ ಸಂತೋಷವಿಲ್ಲವೆಂದು ನೀನು

ಹೇಳುವ ವರ್ಷಗಳೂ ಸಮೀಪಿಸುವದರೊಳಗಾಗಿ ಯೌವನದಲ್ಲಿಯೇ ನಿನ್ನ ಸೃಷ್ಟಿಕರ್ತನನ್ನು ಸ್ಮರಿಸು" (ಪ್ರಸಂಗಿ 12:1). ತೊಂದರೆಗಾಗಿ ಸಿದ್ಧತೆಮಾಡಿಕೊಳ್ಳುವ ಸಮಯವು ಅದು ಸಂಭವಿಸುವದಕ್ಕಿಂತ ಮೊದಲು ಇರುತ್ತದೆ, ಮತ್ತು ನಿಮ್ಮ ಮದುವೆಗಾಗಿ ಬೆಂಬಲಿಸುವ ಜಾಲದ ಮೇಲೆ ಕಾರ್ಯಮಾಡುವುದಕ್ಕೆ ಸಮಯವು ತೊಂದರೆಗಳು ಉದ್ಭವಿಸುವ ಮೊದಲು ಇರುತ್ತದೆ.

## ಮುಕ್ತಾಯ

ಈ ಸಮಯದಲ್ಲಿ ನಿಂತು ಕೊಳ್ಳಿರಿ ಮತ್ತು ನಿಮ್ಮ ವಾಗ್ದಾನಗಳಿಗೆ ಪುನಃ ನಿಮ್ಮನ್ನು ಸಮರ್ಪಿಸಿಕೊಳ್ಳಿರಿ. ದೇವರ ಮುಂದೆ ನೀನು ನಿನ್ನ ಹೆಂಡತಿಯನ್ನು ಇಲ್ಲವೇ ಮಕ್ಕಳನ್ನು ಜೀವನವೆಲ್ಲಾ ಪ್ರೀತಿಸಲು ನಿನ್ನನ್ನು ಪ್ರತಿಷ್ಠಿಸಿಕೊಳ್ಳುವಂತೆ ಅವರ ಹಸ್ತಗಳನ್ನು ನೀನು ತೆಗೆದುಕೊಳ್ಳಲು ಬಯಸಬಹುದು.

---

ಟಿಪ್ಪಣೆಗಳು

[1]ಈ ಪಾಠವು ಯೋಹಾನನ ಸುವಾರ್ತೆಯ ಮೇಲೆ ವ್ಯಾಖ್ಯಾನರೂಪದ ಸರಣಿಗಳ ಮಧ್ಯದಲ್ಲಿ ಪ್ರಸಂಗಿಸಿದ ಒಂದು ಪ್ರಾಸಂಗಿಕ ಉದಾಹರಣೆಯಾಗಿದೆ. ಸಮಾರ್ಯದ ಸ್ತ್ರೀಯು, ತನ್ನ ಐದು ಮದುವೆಗಳೊಂದಿಗೆ, ಮದುವೆಯ ಜೀವನಾವಧಿ ಒಡಂಬಡಿಕೆಯ ಮೇಲೆ ಒಂದು ಪ್ರಾಸಂಗಿಕಕ್ಕೆ ಅದ್ಭುತವಾದ ಮುನ್ನಡಿಸುವಿಕೆಯನ್ನು ಒದಗಿಸುತ್ತಾಳೆ. ಅದರ ಫಲವಾಗಿ, ಬಾವಿಯ ಬಳಿಯಲ್ಲಿಯ ಸ್ತ್ರೀಯ ಕಥೆಯಲ್ಲಿ ಮೇಲಕ್ಕೆ ಬಂದ ವಿಷಯದೊಂದಿಗೆ ಅಭ್ಯಸಿಸುವಂತೆ ಇನ್ನೊಂದು ವಾರ ಬಾವಿಯ ಬಳಿಯಲ್ಲಿ ಉಳಿದುಕೊಳ್ಳೋಣ ಎಂದು ಸಭೆಗೆ ನಾನು ಹೇಳಿದನು. [2]Fred B. Craddock, *Overhearing the Gospel* (Nashville, Tenn.: Abingdon Press, 1978), 9.